ಶುರು ಆಗುತ್ತದೆ. ಆ ರಸ್ತೆಯಲ್ಲಿ ಅವಳು ಪ್ರಯಾಣ ಮುಂದುವರೆಸುವುದೇ ಇಲ್ಲ. ಅಕಸ್ಮಾತ್ ಅದು ಒನ್ ವೇ ಆಗಿದ್ದರೆ ಮಾರನೇ ದಿನ ಚಳಿ–ಜ್ವರ ಗ್ಯಾರಂಟಿ.

ಅವಳ ಪ್ರಕಾರ ರಸ್ತೆಯಲ್ಲಿ ಬಿದ್ದಿರುವ ಹೂವುಗಳು ಎಂದರೆ, ಹೆಣದ ಮೈಮೇಲೆ ಎಸೆಯಲ್ಪಟ್ಟವು ಅಂತಲೇ ಅರ್ಥ.

"ಆತು ಕಣೇ ನೀ ಹೇಳದೂ ಗ್ವತ್ತಾಕತಿ. ಆದರ ಅದಕ್ಕ ನೀ ಹಿಂಗೆ ನೀನೇ ಸತ್ತೋಗಂಗೆ ಹೆದರಿಕ್ಯಂಡ್ರೆ ಹ್ಯಂಗವಾ?" ಅಂತ ಕೇಳಿದರೆ "ತಯೀ... ನೀನೀಗ ಗಾಡಿ ತಿರಿಗಿಸ್ಗ್ಯಂಡು ವಾಪಾಸ್ ಹೊಂಡ್ತೀಯೋ ಇಲ್ಲೋ ಅಷ್ಟೇಳು... ಇಲ್ಲುದ್ದ ಪಂಚಾತಿಗಿ ಮಾಡಬ್ಯಡ... ಬೇಕಾರ ಹೆಣದ ಹಿಂದ ನೀನೂ ಹೋಗು... ನಮ್ಮುನ್ನ ಮಾತ್ರ ಜೀವನ ಹಂಗ ಹಿಂಗ ಅಂತ ಮಳಿ ಹ್ವಡಿಬ್ಯಾಡ..." ಎನ್ನುತ್ತಿದ್ದಳು. ಅಕ್ಷರಶಃ ಸಾವೆಂದರೆ ಅವಳಿಗೆ ಬದ್ಧ ವೈರಿ ಇದ್ದಂತೆ... ಕಣ್ಣಲ್ಲಿ ಕಣ್ಣಿಟ್ಟು ನೋಡಿದರೂ ಎಲ್ಲಿ ಸಾವು ಸೆಳೆದುಕೊಂಡುಬಿಡುತ್ತದೋ ಎಂಬ ಹೆದರಿಕೆಯಲ್ಲಿ ಬದುಕುತ್ತಾ ಕ್ರಮೇಣ ಸಾವಿನಲ್ಲಿ ಉಪಯೋಗಿಸುವ ಎಲ್ಲಾ ಪರಿಕರಗಳ ಬಗ್ಗೆಯೂ ಒಂದು ಬಗೆಯ ಭೀತಿಯನ್ನು ಪೋಷಿಸಿಕೊಂಡಿದ್ದಳು. ಊದಿನಕಡ್ಡಿ, ವಿಭೂತಿ, ಅತ್ತರಿನ ಬಾಟಲಿ, ಕಟ್ಟಿಗೆ, ಕ್ರಿಶ್ಚಿಯನ್ನರ ಕ್ಯಾಸ್ಕೆಟ್ಟು... ಹೀಗೆ ಲಿಸ್ಟು ಬೆಳೆಯುತ್ತಾ ಹೋಯಿತು.

ಪರಿಸ್ಥಿತಿ ವಿಕೋಪಕ್ಕೆ ಹೋಗಿದೆ ಎಂದು ಗೊತ್ತಾದದ್ದು ಯಾವಾಗ ಗೊತ್ತಾ? ನಮ್ಮ ಸ್ನೇಹಿತೆಯೊಬ್ಬಳ ಮದುವೆಗೆ ಹೋದಾಗ ಅವಳು ನಮಗೆ ಹೇಳದೆ ಕೇಳದೆ ಅಲ್ಲಿಂದ ನಾಪತ್ತೆಯಾಗಿದ್ದಳು. ಆಮೇಲೆ ವಿಚಾರಿಸಲಾಗಿ ವಿಷಯ ಹೀಗಿತ್ತು...

"ಯಾಕ ಹುಚ್ಚಿ ಹಂಗ ಓಡೋದಿ ಮದಿವಿ ಮನಿಯಿಂದ?"

"ರೇಣುನ್ನ (ವಧು) ತಮ್ಮ ಆದೇ ಕಾವಿ ಉಟಗಂದಿದ್ನಲ್ಲ? ಅವನ್ನ ಮನ್ನಿ ನಮ್ಮ ಜನುದ್ ಪೈಕಿ ಒಬ್ರು ಹೋಗಿದ್ರು... ಅಲ್ಲಿಗ್ ಬಂದಿದ್ದ ಕಣೇ..."

"ಥು... ನಿನ್ನ ಕ್ವಾಣನಂತಳೇ! ಬದಿಕಿರಾರು ಸತ್ತರನ್ನ ನೋಡಾಕ ಹೋಗಲಾರದೆ ಸತ್ತರು ಬದುಕಿದರನ್ನ ನೋಡಾಕ ಬರತರೇನೇ?"

"ಎನವ... ಅವ್ನುನ್ನ ನೋಡಿದೇಟಿಗೆ ಹ್ಯಣ ನೋಡಿದಂಗಾತು..."

ಹೀಗೆ... ನಮಗೆ ಅತಿರೇಕ ಎನ್ನಿಸಿದ್ದು ಅವಳಿಗೆ ಭಯವೊಂದರ ಸಹಜ ಬೆಳವಣಿಗೆ. ಇದು ಎಲ್ಲಾ ವ್ಯಾಪ್ತಿಗಳನ್ನೂ ಮೀರಿ ಅವಳನ್ನು ಆವರಿಸಿಕೊಳ್ಳುವಾಗ ಅವಳು ಅಸಹಾಯಕಳು ಮಾತ್ರ.

ಯಾವುದೇ ಸಮಾಜಕ್ಕೆ ಎರಡು ಭಯಗಳು ಸದಾ ಕಾಡುತ್ತವೆ ಅನ್ನಿಸುತ್ತೆ ನನಗೆ. ಮೊದಲನೆಯದು ವಿವಿಧ ಆಯಾಮಗಳುಳ್ಳ ಕಾಮದ್ದು. ಇನ್ನೊಂದು, ಜೀವನದ ಅತ್ಯಂತಿಕ ಸತ್ಯವಾದ ಸಾವಿನದ್ದು.

ನನ್ನ ಇನ್ನೊಬ್ಬ ಚಿಕ್ಕಪ್ಪ ತೀರಿಹೋಗುವಾಗ ಅದೇನೋ ತನ್ನ ಜೀವನದ ತಯಾರಿ ಎನ್ನುವಂತೆ ಮಾಡಿಕೊಂಡು ಹೋದರು. ಅವರ ಜೀವನ ಒಂದು ದೊಡ್ಡ ಪಾಠ. ಅವರು ಸತ್ತ ಆರು ತಿಂಗಳಿಗೇ ಅವರ ಪ್ರಾಣ ಸ್ನೇಹಿತ ಕೂಡ ಅವರ ಹಿಂದೆಯೇ ಹೊರಟು ಹೋದರು. ತೀರಿ ಹೋದ ಸುದ್ದಿ ಕೇಳಿ ಅವರ ಮನೆಗೆ ಹೋದರೆ, ಗಂಡನ ಶವ ಮುಂದಿಟ್ಟುಕೊಂಡು ಆ ಸ್ನೇಹಿತನ ಹೆಂಡತಿ ಹೇಳಿದರು:

"ಮೌಳಿ (ಚಿಕ್ಕಪ್ಪ) ಸತ್ತ ದಿನದಿಂದೂ ಇಲ್ಲದಲೆ ಕಾಡ್ಸರ್ನ ಹ್ಯಂಗ ಆಡದು... ಜೀವನ ಹ್ಯಾಂಗ ಮಾಡದು ಅಂತ ಕೊರಗೀ ಕೊರಗೀ ಸತ್ತೇ ಹೋದ್ರು... ಹೋಗಲಿ ಬಿಡವಾ... ನನಿಗರೆ ಸ್ನೇಹಿತ್ರು ಒಂದಾಗ್ಯಾರ ಅನ್ನಾ ಸಮಾಧಾನ ಐತಿ..." ಎನ್ನುತ್ತಾ ಕೂತಿದ್ದರು.

"ಆಂಟೀ ಬೇಜಾರು ಮಾಡಿಕ್ಯಬ್ಯಾಡ್ರೀ... ಧೈರ್ಯ ಇರಲಿ..."

"ಹ್ವಗ! ನಾ ಯಾಕ ಧೈರ್ಯ ಕಳಕಬಕು? ಇದ್ರು ಹೋದ್ರು... ನಾವೂ ಹೋಗದೇಯ... ಪಾಳಿ ಬ್ಯಾರೆ ಅಷ್ಟೆ!" ಎನ್ನುತ್ತಾ ತಮ್ಮ ವಾಸ್ತವವಾದೀ ವ್ಯಕ್ತಿತ್ವವನ್ನು ಮುಂದಿಟ್ಟರು. ಇದು ಒಂದು